ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 13 ಬಿಎಲ್‌ಡಿ 2013
ಅಡಕ:

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:13-08-2013.

ಇವರಿಗೆ,

ಪ್ರಿನ್ಸಿಪಾಲರು,

1. ಸರ್ಕಾರಿ ಪಾಲಿಟೆಕ್ನಿಕ್, ತುರುವೇಕೆರೆ / ಗದಗ್/ ಗಜೇಂದ್ರಗಡ / ಲಿಂಗಸುಗೂರ್ / ಹರಪ್ಪನಹಳ್ಳಿ / ಮುಳಬಾಗಿಲು / ಜೋಯಿಡಾ / ಅಫ್‌ಜಲ್‌ಪುರ / ಶ್ರೀರಂಗಪಟ್ಟಣ / ನಾಗಮಂಗಲ / ಬೀದರ್ / ಬಂಕಾಪುರ / ಮಿರ್ಲೆ / ಹೊಳೆನರಸೀಪುರ / ಚಿತ್ರದುರ್ಗ / ಬೇಲೂರು / ಉಡುಪಿ / ಬಂಟ್ವಾಳ / ಬಾಗಲಕೋಟೆ / ಬೀಳಗಿ / ಗುಲ್ಬರ್ಗಾ / ಬಳ್ಳಾರಿ / ಬೀದರ್ / ಬೆಳಗಾಂ / ಕುಶಾಲನಗರ / ಚಿಂತಾಮಣಿ / ಚನ್ನಪಟ್ಟಣ / ಸೊರಬ / ಬಿಜಾಪುರ / ಚಾಮರಾಜನಗರ / ಬಾಗೇಪಲ್ಲಿ / ಹಾನಗಲ್ / ಕಾರವಾರ / ಕುಷ್ಟಗಿ / ಕೆ.ಆರ್.ಪೇಟೆ / ರಾಯಚೂರು / ತುಮಕೂರು / ರಾಮನಗರ / ಕೊಪ್ಪಳ.
2. ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಮಂಗಳೂರು / ಶಿವಮೊಗ್ಗ / ಹುಬ್ಬಳ್ಳಿ / ಹಾಸನ / ಶಿರಾಳಕೊಪ್ಪ / ಕಾರ್ಕಳ / ಬೆಂಗಳೂರು / ಗುಲ್ಬರ್ಗಾ / ರಾಮನಗರ
3. ಡಿ.ಎ.ಸಿ.ಜಿ.(ಸರ್ಕಾರಿ)ಪಾಲಿಟೆಕ್ನಿಕ್, ಚಿಕ್ಕಮಗಳೂರು
4. ಸಿ.ಪಿ.ಸಿ.(ಸರ್ಕಾರಿ)ಪಾಲಿಟಕ್ನಿಕ್, ಮೈಸೂರು
5. ಡಿ.ಆರ್.ಆರ್.(ಸರ್ಕಾರಿ) ಪಾಲಿಟೆಕ್ನಿಕ್, ದಾವಣಗೆರೆ
6. ಜಿ.ಆರ್.ಐ.ಸಿ.ಪಿ(ಸರ್ಕಾರಿ) ಸಂಸ್ಥೆ, ಬೆಂಗಳೂರು
7. ಎಸ್.ಜೆ.(ಸರ್ಕಾರಿ) ಪಾಲಿಟೆಕ್ನಿಕ್, ಬೆಂಗಳೂರು
8. ಶ್ರೀಮತಿ ಎಲ್.ವಿ(ಸರ್ಕಾರಿ) ಪಾಲಿಟೆಕ್ನಿಕ್, ಹಾಸನ
9. ಕರ್ನಾಟಕ ಸರ್ಕಾರಿ ಪಾಲಿಟೆಕ್ನಿಕ್, ಮಂಗಳೂರು
10. ಸರ್ಕಾರಿ ಮುದ್ರಣ ತಂತ್ರಜ್ಞಾನ ಸಂಸ್ಥೆ, ಬೆಂಗಳೂರು
11. ಸರ್ಕಾರಿ ಎಸ್.ಆರ್.ಸಿ.ಐ.ಬಿ.ಎಮ್. ಸಂಸ್ಥೆ, ಬೆಂಗಳೂರು
12. ಸರ್ಕಾರಿ ತಾಂತ್ರಿಕ ಜವಳಿ ಸಂಸ್ಥೆ, ಬೆಂಗಳೂರು
13. ವಿ.ಐ.ಎಸ್. ಎಸ್.ಜೆ. ಸರ್ಕಾರಿ ಪಾಲಿಟೆಕ್ನಿಕ್, ಭದ್ರಾವತಿ
14. ಸರ್ಕಾರಿ ಗಣಿ ಶಿಕ್ಷಣ ಶಾಲೆ, ಕೆ.ಜಿ.ಎಫ್
15. ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹಾವೇರಿ / ಕೆ.ಆರ್.ಪೇಟೆ / ಕುಶಾಲನಗರ / ಚಾಮರಾಜನಗರ / ಹಾಸನ / ರಾಮನಗರ / ರಾಯಚೂರು / ಕಾರವಾರ / ಹೂವಿನಹಡಗಲಿ
16. ಸರ್ಕಾರಿ ಎಸ್.ಕೆ.ಎಸ್.ಜೆ.ಟಿ. ಕಾಲೇಜು, ಬೆಂಗಳೂರು

ಮಾನ್ಯರೆ,

ವಿಷಯ: ಹೊಸ ಪಾಲಿಟೆಕ್ನಿಕ್ / ಇಂಜಿನಿಯರಿಂಗ್ ಕಾಲೇಜು ಕಟ್ಟಡ ನಿರ್ಮಾಣ ಹಾಗೂ ಎಮ್.ಹೆಚ್‌ಆರ್.ಡಿ. ವತಿಯಿಂದ ನಿರ್ಮಿಸುತ್ತಿರುವ ಮಹಿಳಾ ವಸತಿ ನಿಲಯ ಕಟ್ಟಡದ ಮಾಹಿತಿಯನ್ನು ವೆಬ್‌ಸೈಟ್‌ಗೆ ಅಳವಡಿಸುವ ಬಗ್ಗೆ.

ಉಲ್ಲೇಖ: ಮಾನ್ಯ ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರ ಸಭೆ ದಿನಾಂಕ: 12-08-2013.

---------

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ 12-08-2013 ರಂದು ಮಾನ್ಯ ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ, ಮಾನ್ಯ ಉನ್ನತ ಶಿಕ್ಷಣ ಸಚಿವರು ಹೊಸದಾಗಿ ಪ್ರಾರಂಭಿಸಲಾದ ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಕಟ್ಟಡದ ನಿರ್ಮಾಣ ಹಾಗೂ ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ ವತಿಯ ಅನುದಾನದಿಂದ ನಿರ್ಮಾಣವಾಗುತ್ತಿರುವ ವಿದ್ಯಾರ್ಥಿನಿಯರ ವಿದ್ಯಾರ್ಥಿನಿಲಯದ ಕಟ್ಟಡದ ನಿರ್ಮಾಣದ ಮಾಹಿತಿಗಳನ್ನು ಪ್ರತಿ ಹದಿನೈದು ದಿವಸಗಳಿಗೊಮ್ಮೆ ಕಟ್ಟಡಗಳ ನಿರ್ಮಾಣದ ಪ್ರಗತಿಯನ್ನು ಛಾಯಚಿತ್ರಗಳೊಂದಿಗೆ ನಿರ್ದೇಶಕರ ವೆಬ್‌ಸೈಟ್ ಹಾಗೂ ಪಾಲಿಟೆಕ್ನಿಕ್ / ಇಂಜಿನಿಯರಿಂಗ್ ಕಾಲೇಜು ಸಂಸ್ಥೆಗಳ ವೆಬ್‌ಸೈಟ್‌ಗಳಲ್ಲಿ ಅಳವಡಿಸಲು ಸಂಸ್ಥೆಯ ಪ್ರಿನ್ಸಿಪಾಲರುಗಳಿಗೆ ಸೂಚನೆಯನ್ನು ನೀಡಬೇಕೆಂದು ಆದೇಶಿಸಿರುತ್ತಾರೆ. ಪ್ರತಿ ತಿಂಗಳಿಗೊಮ್ಮೆ ಕಟ್ಟಡಗಳ ಪ್ರಗತಿಯ ಪರಿಶೀಲನೆಯನ್ನು ನಿರ್ದೇಶಕರು, ಎರಡು ತಿಂಗಳಿಗೊಮ್ಮೆ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಮಾಡಬೇಕೆಂದು ಹಾಗೂ ಮೂರು ತಿಂಗಳಿಗೊಮ್ಮೆ ತಾವು ಕಟ್ಟಡಗಳ ನಿರ್ಮಾಣದ ಪ್ರಗತಿ ಪರಿಶೀಲನೆಯನ್ನು ಮಾಡುವುದಾಗಿ ಸಹ ಮಾನ್ಯ ಉನ್ನತ ಶಿಕ್ಷಣ ಸಚಿವರು ಆದೇಶಿಸಿರುತ್ತಾರೆ.

ಆದುದರಿಂದ ತಮ್ಮ ಸಂಸ್ಥೆಯ ಹೊಸ ಕಟ್ಟಡದ ನಿರ್ಮಾಣ ಹಾಗೂ ವಿದ್ಯಾರ್ಥಿನಿಯರ ವಿದ್ಯಾರ್ಥಿನಿಲಯದ ಕಟ್ಟಡದ ನಿರ್ಮಾಣಕ್ಕೆ ಸಂಬಂಧಿಸಿದಂತೆ, ಖರ್ಚುವೆಚ್ಚ, ಪ್ರಗತಿಯನ್ನು ಛಾಯಚಿತ್ರಗಳೊಂದಿಗೆ ಪ್ರತ್ಯೇಕವಾಗಿ ನಿರ್ದೇಶಕರ ವೆಬ್‌ಸೈಟ್ ಹಾಗೂ ತಮ್ಮ ಸಂಸ್ಥೆಯ ವೆಬ್‌ಸೈಟ್‌ಗಳಲ್ಲಿ ಪ್ರತಿ ಹದಿನೈದು ದಿವಸಗಳಿಗೊಮ್ಮೆ ತಪ್ಪದೇ ಅಳವಡಿಸಲು ಸೂಕ್ತ ಕ್ರಮಕೈಗೊಳ್ಳಬೇಕೆಂದು ಸೂಚಿಸಲಾಗಿದೆ.

ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜು ಕಟ್ಟಡ ಹಾಗೂ ವಿದ್ಯಾರ್ಥಿನಿಯರ ವಿದ್ಯಾರ್ಥಿನಿಲಯ ಕಟ್ಟಡಗಳ ನಿರ್ಮಾಣವು ಪೂರ್ಣಗೊಂಡ ನಂತರ, ಇವುಗಳ ಉದ್ಘಾಟನೆಗೆ ಸಂಬಂಧಿಸಿದಂತೆ ಮಾನ್ಯ ಉನ್ನತ ಶಿಕ್ಷಣ ಸಚಿವರು, ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ನಿರ್ದೇಶಕರ ಅನುಮೋದನೆಯೊಂದಿಗೆ ಪ್ರೋಟೋಕಾಲ್ ಪ್ರಕಾರ ಸೂಕ್ತ ಕ್ರಮಕೈಗೊಳ್ಳಬೇಕೆಂದು ಸಹ ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ

ನಿರ್ದೇಶಕರು

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560001

ಪ್ರತಿ ಇವರಿಗೆ:

1. ಮಾನ್ಯ ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರ ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು ಇವರ ಮಾಹಿತಿಗಾಗಿ.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು – 560 001 – ಇವರ ಮಾಹಿತಿಗಾಗಿ.
3. ಶ್ರೀ.ಐ.ಎಫ್.ಮಾಗಿ, ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ಯೋಜನೆ), ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560 001 ಇವರ ಮಾಹಿತಿಗಾಗಿ.
4. ಇ-ಆಡಳಿತ ವಿಭಾಗಕ್ಕೆ ವೆಬ್‌ಸೈಟ್‌ನಲ್ಲಿ ಮಾಹಿತಿಯನ್ನು ಪ್ರಕಟಿಸಲು ಸೂಚಿಸಿದೆ.